ಒ ಎಸ್ 248/2024 ಪಿ.ಡಬ್ಲ್ಯೂ:1

ಇಂದು ದಿಃ 07.03.2026 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು 9ನೇ ತರಗತಿವರೆಗೆ ಓದಿದ್ದೇನೆ. ಹೆಚ್ಚಾಗಿ ಬರೆಯಲು ಬರುವುದಿಲ್ಲ ಸಹಿ ಮಾಡುತ್ತೇನೆ. ಪುಟ್ಟಮಾದಪ್ಪ ಅಜ್ಜಿ ಬಸಮ್ಮ, ಅವರಿಗೆ ಒಟ್ಟು 6 ಜನ ಮಕ್ಕಳು. ನನ್ನ ತಂದೆಗೆ ಇಬ್ಬರು ಹೆಂಡತಿಯರು ಮೊದಲನೆಯವರು ಪಾತಮ್ಮ, 2ನೇಯವರು ಗಂಗಮ್ಮ. ನಮ್ಮ ತಂದೆ ತಾಯಿಗೆ 6 ಜನ ಮಕ್ಕಳು. ಪಾತಮ್ಮನಿಗೆ 2 ಹೆಣ್ಣು ಮಕ್ಕಳು, ಅವರಿಬ್ಬರೂ ಮೃತರಾಗಿದ್ದಾರೆ. ಮುದ್ದಮ್ಮ ನಂಜಪ್ಪನಿಗೆ ಮದುವೆಯಾಗಿದ್ದರು. ಅವರಿಗೆ 3 ಜನ ಮಕ್ಕಳು. ನಂಜಪ್ಪ ಮೃತಪಟ್ಟು 3-4 ವರ್ಷ ಆಗಿರುತ್ತದೆ. ನಂಜಪ್ಪನ ಜೊತೆ ನಾನು ಅವರು ಜೀವಂತ ಇರುವವರೆಗೂ ಚೆನ್ನಾಗಿದ್ದೆ. ನಂಜಪ್ಪ ನನ್ನ ಮೇಲೆ ಮತ್ತು 1ನೇ ಪ್ರತಿವಾದಿ ವಿರುದ್ದ ಯಾವುದೇ ಪ್ರಕರಣ ದಾಖಲಿಸಿಲ್ಲ. ಆ ಪ್ರಕರಣ ವಜಾ ಆಯಿತು ಎಂದರೆ ಸರಿ. ಆ ಪ್ರಕರಣದಲ್ಲಿ ನಾನು 2 ನೇ ಪ್ರತಿವಾದಿ, ದೊಡ್ಡಮಲ್ಲಪ್ಪ 1ನೇ ಪ್ರತಿವಾದಿ ಮತ್ತು ಪುಟ್ಟಸ್ವಾಮಿ 3ನೇ ಪ್ರತಿವಾದಿಯಾಗಿದ್ದರು. ಆ ಒ ಎಸ್ 70/2012ರಲ್ಲಿ ನಾನು ತಕರಾರು ಸಲ್ಲಿಸಿದ್ದೆ. ಆ ದಾವೆಯಲ್ಲಿ ನಾನು ಹೇಳಿಕೆ ಬರೆಸಿ ನಮ್ಮ ಮಗಳಾದ ಮುದ್ದಮ್ಮನಿಗೆ ನನ್ನ ತಂದೆ ಕೊಟ್ಟಿದ್ದರು ಅದನ್ನು ನನ್ನ ಭಾವ ನಂಜಪ್ಪ ಸ್ವಾಧೀನದಲ್ಲಿ ಇದ್ದರು ಎಂದು ಬರೆಸಿದ್ದೆ. ಬೇರೆ ಆಸ್ತಿಯನ್ನು ಸಹ ನನ್ನ ತಂದೆ ನಮಗೂ ಕೊಟ್ಟಿದ್ದರು ಎಂದು ಆ ದಾವೆಯಲ್ಲಿ ಬರೆಸಿದ್ದೆ. ಆ ಆಸ್ತಿಯಲ್ಲಿ ಮುದ್ದಮ್ಮನಿಗೆ ಮಾತ್ರ ಹಕ್ಕು ಎಂದು ಬರೆಸಿಲ್ಲ ಆದರೆ ಊಟಕ್ಕೆ ಬಿಟ್ಟಿದ್ದೇವೆ ಎಂದು ಬರೆಸಿದ್ದೇನೆ. ನಂಜಪ್ಪರವರು ಒ ಎಸ್ 70/2012ರ ತೀರ್ಪನ್ನು ಪ್ರಶ್ನಿಸಿದ್ದರು ಎಂದರೆ ಸರಿ. ಒ ಎಸ್ 70/2012ರ ತೀರ್ಪನ್ನು ನಾನು ಪ್ರಶ್ನಿಸಿಲ್ಲ. ನನ್ನ ತಂದ ಮತ್ತು ಅವರ ಅಣ್ಣ ತಮ್ಮಂದಿರು 50 ವರ್ಷಗಳ ಹಿಂದೆ ವಿಭಾಗ ಮಾಡಿಕೊಂಡರೋ ಎಂದು ನನಗೆ ಗೊತ್ತಿಲ್ಲ. ಒ ಎಸ್ 70/2012 ವಜಾ ಆದ ನಂತರ ವಿಭಾಗದ ದಾವೆ 59/2022 ಅನ್ನು ನಾನು ಸಲ್ಲಿಸಿದ್ದೆನು. ನಮ್ಮ ತಾತನಿಗೆ ಒಟ್ಟು 5 ಜನ ಮಕ್ಕಳು ಎಂದು ಆ ದಾವೆಯಲ್ಲಿ ಬರೆಸಿಲ್ಲ. ಆ ದಾವೆ ವಾಪಸ್ಸು ಪಡೆದುಕೊಂಡ ನಂತರ ಹಕ್ಕು ಘೋಷಣೆಗಾಗಿ ಈ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

ದಿನಾಂಕ 12.08.1942ರ ಪಂಚಾಯಿತಿ ಪಾಲು ಪಾರಿಕತ್ ಅನ್ನು ನಾನು ಓದಿರುತ್ತೇನೆ. 4 ಎಕರೆ ಆಸ್ತಿ ನನ್ನ ತಂದೆಗೆ ಬಂತು ಎಂದು ಆ ಪಾಲು ಪಾರಿಕತ್ ನಲ್ಲಿ ಇದೆ. ಈ ದಾವೆಯನ್ನು ನಾನು 4 ಎಕರೆ ಪೈಕಿ 3 ಎಕರೆ 24 ಗುಂಟೆ ಜಮೀನು ಬರಬೇಕು ಎಂದು ಸಲ್ಲಿಸಿರುತ್ತೇನೆ. ಪಂಚಾಯಿತಿ ಪಾಲು ಪಾರಿಕತ್ ನೊಂದಾವಣೆಯಾಗಿರಲಿಲ್ಲ. ಪಂಚಾಯಿತಿ ಪಾಲು ಪಾರಿಕತ್ ನಲ್ಲಿ ಸರ್ವೆ ನಂಬರ್ ನಮೂದು ಇಲ್ಲ ಆದರೆ ಮಧ್ಯೆ ಇರುವ ಸರ್ವೆ ನಂಬರ್ ಆಸ್ತಿಯು 3 ಎಕರೆ 24 ಗುಂಟೆ ಮುದ್ದಪ್ಪನಿಗೆ ಸೇರತಕ್ಕದ್ದು ಎಂದು ಇದೆ. 3 ಎಕರೆ 24 ಗುಂಟೆಯಲ್ಲಿ 1 ಎಕರೆ 24 ಗುಂಟೆ 6ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ. 2 ಎಕರೆ ಇನ್ನು ಸಹ

ಮಾದಪ್ಪನ ಹೆಸರಿನಲ್ಲಿ ಖಾತೆ ಇದೆ. ಪಂಚಾಯಿತಿ ಪಾಲು ಪಾರಿಕತ್ ಪ್ರಕಾರ ನನ್ನ ತಂದೆ ಮತ್ತು ಅವರ ಅಣ್ಣ ತಮ್ಮಂದಿರ ನಡುವೆ ಖಾತೆ ಆಗಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ಆರ್ ಟಿ ಸಿ ಯಲ್ಲಿ ವಿಭಾಗ 1966-97ರಲ್ಲಿ ಆಗಿದೆ ಎಂದು ಇದೆ ಎಂದರೆ ನಾನು ಓದಿಲ್ಲ.

ಮಾದಪ್ಪ ನನ್ನ ವಿರುದ್ಧ ಒ ಎಸ್ 325/2021 ಎಂದು ಶಾಶ್ವತ ನಿರ್ಬಂಧಕಾಜ್ಞೆ ಕೋರಿ ದಾವೆ ಸಲ್ಲಿಸಿದ್ದಾರೆ ಎಂದರೆ ಗೊತ್ತಿಲ್ಲ. ಜಂಟಿ ಸ್ವಾಧೀನ ಇದ್ದೇವೆ ಎಂದು ನಾನು ಆ ದಾವೆಯಲ್ಲಿ ತಕರಾರು ಸಲ್ಲಿಸಿದ್ದೇನೆ ಎಂದರೆ ಸರಿ. 1 ಎಕರೆ 24 ಗುಂಟೆ ಆಸ್ತಿಯ ಚೆಕ್ಕುಬಂಧಿ ಪೂರ್ವಕ್ಕೆ ನನ್ನ ಚಿಕ್ಕಪ್ಪನ ಮಗ, ಪಶ್ಚಿಮಕ್ಕೆ ಓಣಿ, ಉತ್ತರಕ್ಕೆ  ನನ್ನ ಜಮೀನು ನಂತರ ಕುಂಟಯ್ಯನ ಜಮೀನು ದಕ್ಷಿಣಕ್ಕೆ ಸೋಮಪ್ಪನ ಜಮೀನು ಇದೆ. ಜಮೀನು ಕುರಿತು ನಮ್ಮ ನಡುವೆ ಒಂದು ಕ್ರಿಮಿನಲ್ ಪ್ರಕರಣ ಇದೆ. ಮಾದಪ್ಪ ಉಳುಮೆ ಮಾಡುತ್ತಿದ್ದಾಗ ನಾವು ಹೋಗಿ ತಡೆದೆವು ಎಂದು ಅವರು ದೂರು ಕೊಟ್ಟಿದ್ದಾರೆ ಎಂದರೆ ಸರಿ ಆದರೆ ನಾವು ಉಳುಮೆ ಮಾಡುವಾಗ ತಡೆದು ನಮ್ಮ ವಿರುದ್ಧವೇ ದೂರು ಕೊಟ್ಟಿದ್ದರು. 3 ಎಕರೆ 24 ಗುಂಟೆ ಜಮೀನಿನಲ್ಲಿ 1 ಎಕರೆ 24 ಗುಂಟೆಯನ್ನು  6ನೇ ಪ್ರತಿವಾದಿಗೆ ಮಾರಾಟ ಮಾಡಿದ್ದು, ಉಳಿಕೆ 2 ಎಕರೆಯಲ್ಲಿ 1ನೇ ಪ್ರತಿವಾದಿ ಸ್ವಾಧೀನ ಇದ್ದಾರೆ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನನಗೆ ಯಾವುದೇ ಹಕ್ಕು ಇಲ್ಲ ಮತ್ತು ನಾನು ಹಾಕಿರುವ ಎಲ್ಲಾ ದಾವೆಗಳು ವಜಾ ಆಗಿವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಾನು ಸ್ವಾಧೀನ ಇಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಸಹಿ/-

ಹಿರಿಯ ಸಿವಿಲ್ ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ, ನಂಜನಗೂಡು.